# ಆಧುನಿಕ ಜೀವನಕ್ಕೆ ಗೀತೆಯ ಅಗತ್ಯ

ಡಾ. ಹೆಚ್. ಪಾಂಡುರಂಗ ವಿಠಲ



ಗೀತೆಯು ಎಷ್ಟೇ ಹಳೆಯದಾದರೂ ನಿತ್ಯನೂತನವಾದ ಗ್ರಂಥ. ಕಾರಣ, ಇದು ತಿಳಿಸಿಕೊಡುವ ತತ್ತ್ವಗಳು ಸಾರ್ವಕಾಲಿಕ ಹಾಗೂ ವಿಶ್ವವ್ಯಾಪಕವಾದವುಗಳು. ಈ ಕೃತಿ ಹೇಗೆ ಇಂದಿಗೂ ಪ್ರಸ್ತುತವಾಗಿದೆ ಎಂಬುದನ್ನು ವಿಶ್ಲೇಷಿಸಿರುವ ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಒಳ್ಳೆಯ ಚಿಂತಕರೂ, ಬರಹಗಾರರೂ ಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಆದರ್ಶವಾದ ಜೀವನ ನಡೆಸಲು ಪ್ರಸಿದ್ಧ ಶಿಕ್ಷಕನಾದ ಕೃಷ್ಣನಿಂದ ಮಾನವನಿಗೆ ದೊರೆತಿರುವ ಅತ್ಯಂತ ಪ್ರಾಯೋಗಿಕ ಪಾಠ ಗೀತೆ. ಬಾಂಧವರನ್ನು ಕೊಲ್ಲಲಾರೆ, ಇಷ್ಟವಿಲ್ಲದ, ನಿರರ್ಥಕವಾದ ಯುದ್ಧ ಮಾಡಲಾರೆ ಎಂದು ಖಿನ್ನನಾಗಿ ಕುಳಿತ ಅರ್ಜುನನಿಗೆ ಕರ್ಮದ ಜ್ಞಾನ ನೀಡಿ, ಉಗ್ರ ಪರಾಕ್ರಮಿಯನ್ನಾಗಿಸಿದನು ಕೃಷ್ಣ. ಅರ್ಜುನನ ಸ್ವಂತಿಕೆ ಇರುವುದು ಪರಾಕ್ರಮದಲ್ಲಿ, ದೌರ್ಬಲ್ಯದಲ್ಲಿ ಅಲ್ಲ. ಜೀವನ ನಮ್ಮೆದುರು ಅನೇಕ ಸಂದಿಗ್ಧತೆ, ಆತಂಕ ಸನ್ನಿವೇಶಗಳನ್ನು ಇಡುತ್ತದೆ. ಇವನ್ನು ಎದುರಿಸಲು ಅಗತ್ಯವಾದ ಜೀವನ ಕೌಶಲ್ಯಗಳನ್ನು ನಮ್ಮ ಶಿಕ್ಷಣ ನೀಡಲಾರದು. ಗೊಂದಲಗಳಲ್ಲಿಯೂ ನಾವು ನಿಂತು ಹೋರಾಡಲೇಬೇಕು, ನಮ್ಮ ಪಾತ್ರವನ್ನು ನಿರ್ವಹಿಸದೆ ರಂಗದಿಂದ ಓಡುವಂತಿಲ್ಲ. ಗೀತೆಯ ಮುಖ್ಯವಾದ ಪಾಠವೇ ಕರ್ತವ್ಯಕ್ಕೆ ಕಾಯೇನ ವಾಚಾ ಮನಸಾ ಪೂರ್ಣವಾಗಿ ನಮ್ಮನ್ನು ನೀಡುವುದು; ಫಲ ಸಿಕ್ಕೀತೇ ಎಂದು ನೋಡದಿರುವುದು. ಏಕೆಂದರೆ, ನಮ್ಮ ಕೈಯಲ್ಲಿ ಪ್ರಯತ್ನ ಮಾತ್ರ ಇದೆ, ಫಲಿತಾಂಶವಲ್ಲ. ಧರ್ಮದ ಮಾರ್ಗವನ್ನು ಅನುಸರಿಸಿ, ನಿಸ್ವಾರ್ಥದ ಉದಾತ್ತ ಉದ್ದೇಶವಿದ್ದು ಫಲವನ್ನು ದೇವರಿಗೆ ಅರ್ಪಿಸಿದಲ್ಲಿ, ಫಲ ದೊರೆಯುವುದು. ಭಯ, ಅನುಮಾನ ಹಾಗೂ ಅಜ್ಞಾನಗಳನ್ನು ತೊರೆದು, ದೇವರಲ್ಲಿ ಪೂರ್ಣ ನಂಬಿಕೆಯನ್ನು ಇಡಿ ಎಂಬುದು ಗೀತೆಯ ಸಾರ. ಗೀತೆ ಮನೋವೈಜ್ಞಾನಿಕ ವಿಧಾನಗಳನ್ನು ಬಳಸಿ, ಆಧುನಿಕರಿಗೂ ಅನ್ವಯವಾಗುವ ಪಾಠಗಳನ್ನು ನೀಡುತ್ತದೆ.

ಗೀತೆಯ ಮೊದಲನೆಯ ಅಧ್ಯಾಯದಲ್ಲಿ ಬಂಧುಗಳನ್ನೇ ಯುದ್ಧಕ್ಕಾಗಿ ಕೊಲ್ಲಬೇಕಾದ ದುಃಖ, ಖಿನ್ನತೆಗಳನ್ನು ಸಹಿಸದ ಅರ್ಜುನ ಅದಕ್ಕೆ ಒಂದು ಹೊಸ ತರ್ಕವನ್ನು ನೀಡುತ್ತಾನೆ. ಅಂದರೆ, ಯುದ್ಧದಿಂದ ತಮ್ಮವರನ್ನೆ ಕೊಂದರೆ ಕುಲಸ್ತ್ರೀಯರು ಕೆಟ್ಟು, ವರ್ಣಸಂಕರವಾಗಿ, ಜಾತಿಧರ್ಮ, ಕುಲಧರ್ಮಗಳು ನಷ್ಟವಾಗುವುವು ಎನ್ನುತ್ತಾನೆ. ಅರ್ಜುನನ ದುಃಖವು ತಪ್ಪಾಗಿ ಯೋಚಿಸುವುದರಿಂದ ಬಂದದ್ದು, ಇದು ಜೀವನದ ಮುಖ್ಯ ಸಮಸ್ಯೆ ಎಂದು ಕೃಷ್ಣ ಗುರುತಿಸುತ್ತಾನೆ. ಆರ್ಯರಿಗೆ ಅಯೋಗ್ಯವೂ, ಸ್ವರ್ಗಗತಿಗೆ ವಿರೋಧವೂ, ಅಪಕೀರ್ತಿಗೆ ಕಾರಣವೂ ಆದ ಮೋಹವು ನಿನ್ನನ್ನು ಈ ವಿಷಮ ಸಮಯದಲ್ಲಿ ಕವಿದಿದೆ. ಈ ದೌರ್ಬಲ್ಯವನ್ನು ಬಿಡು, ಷಂಡನಾಗದಿರು ಎನ್ನುತ್ತ ನಿನ್ನ ಮಾತುಗಳು ಪ್ರಜ್ಞಾವಾದ – ತಪ್ಪಾಗಿ ಯೋಚಿಸುವುದು ಎಂದು ಹೇಳುತ್ತಾನೆ. ಆಧುನಿಕ ಜೀವನದ ಸಮಸ್ಯೆಗಳಲ್ಲಿ ಸಿಲುಕಿದಾಗ ನಾವು ನಮ್ಮ ಮನದೊಳಗೇ ಹೆಚ್ಚು ಹೆಚ್ಚು ಯೋಚಿಸುತ್ತ ನಮ್ಮನ್ನು ಸಮರ್ಥಿಸಿಕೊಳ್ಳುವುದು ಸರಿಯಲ್ಲ ಎಂದು ತೋರಿಸಿಕೊಡುತ್ತಾನೆ. ತಪ್ಪಾದ ಯೋಚನೆಯಿಂದ ತಪ್ಪು ನಿರ್ಣಯಗಳಿಗೆ ನಾವು ಬರುತ್ತೇವೆ. ಕೃಷ್ಣನ ಮಾತು ಅರ್ಥವಾಗದೆ, ಸಮಾಧಾನವಾಗದೆ ಅರ್ಜುನನು ವಿಷಾದದಲ್ಲಿಯೆ ಕುಳಿತುಕೊಳ್ಳುವುದರಿಂದ ಗೀತೆಯ ಮುಂದಿನ ವಿವರಣೆಗಳು ಬಂದಿವೆ. ಕೃಷ್ಣನ ಮಾತುಗಳಿಂದ ಪ್ರೇರಣೆಗೊಂಡ ಅರ್ಜುನ ಕೊನೆಯಲ್ಲಿ 'ನಿನ್ನ ಅನುಗ್ರಹದಿಂದ ನನ್ನ ಮೋಹವು ನಷ್ಟವಾಯಿತು, ಆತ್ಮವಿಷಯಕವಾದ ಸ್ಮೃತಿಯು ಉಂಟಾಯಿತು; ಸಂದೇಹಗಳೆಲ್ಲ ಹೋಗಿ ತಿಳಿವು ಉಂಟಾಯಿತು. ನಿನ್ನ ಉಪದೇಶ

ದಂತೆ ನಡೆಯುತ್ತೇನೆ' ಎನ್ನುತ್ತಾನೆ. ನಾನು ಯಾರು? ನನ್ನ ಪಾತ್ರವೇನು? ನನ್ನ ಕರ್ತವ್ಯವೇನು? ಎಂಬ ವಿಷಯದಲ್ಲಿ ತಪ್ಪಾಗಿ ಯೋಚಿಸುವುದೇ ಆಧುನಿಕ ಜೀವನದ ಸಮಸ್ಯೆಗಳಿಗೆ ಕಾರಣ. ಹೀಗಾಗಿ, ಸರಿಯಾದ ವಿಚಾರಗಳನ್ನು ವಿವರಿಸುವ ಗೀತೆಯ ಅಧ್ಯಯನವು ಆಧುನಿಕ ಜೀವನಕ್ಕೆ ಅತಿ ಅವಶ್ಯವಾಗಿದೆ.

ಮುಂದುವರಿದು, ಶ್ರೀಕೃಷ್ಣನು ಆತ್ಮವು ಅವಿನಾಶಿ, ಪುನರ್ಜನ್ಮ ಇದೆ, ಭೀಷ್ಮರೇ ಮೊದಲಾದ ಬಂಧುಬಾಂಧವರ ಆತ್ಮವನ್ನು ಕೊಲ್ಲಲಾಗದು, ಅದು ಶಾಶ್ವತ ಎನ್ನುತ್ತಾನೆ. ಯುದ್ಧ ಮಾಡುವುದನ್ನು ಬಿಟ್ಟರೆ ನಿನ್ನ ಕ್ಷತ್ರಿಯ ಧರ್ಮವನ್ನು ಬಿಟ್ಟಂತೆ; ಅಲ್ಲದೆ ಹೇಡಿ ಎನ್ನಿಸಿಕೊಳ್ಳುವೆ ಎನ್ನುತ್ತಾನೆ. ಮನೋವಿಜ್ಞಾನಿಯಂತೆ ಕೃಷ್ಣನು ಮನುಷ್ಯನ ಮನಸ್ಸು ಪ್ರವರ್ತಿಸುವ ರೀತಿಯನ್ನು ವಿವರಿಸುತ್ತಾನೆ: ಇಂದ್ರಿಯಗಳು ವಿಷಯಗಳೊಂದಿಗೆ ಸಂಪರ್ಕಗೊಳ್ಳುವುದು ಸಂತೋಷ ಮತ್ತು ದುಃಖದ ಗ್ರಹಿಕೆಗಳಿಗೆ ಕಾರಣ. ವಿಷಯಗಳಿಗೆ ಅಂಟಿಕೊಳ್ಳುವಿಕೆಯು ಆಸೆಗೆ ಕಾರಣವಾಗುತ್ತದೆ. ಆಸೆಯ ಈಡೇರಿಕೆಯು ದುರಾಶೆಗೆ ಕಾರಣ. ದುರಾಸೆಯು ಈಡೇರದಿದ್ದಲ್ಲಿ ಕೋಪಕ್ಕೆ ಕಾರಣವಾಗುತ್ತದೆ. ಕೋಪವು ನಿರ್ಣಯಜ್ಞಾನವನ್ನು ಮಸುಕುಗೊಳಿಸುತ್ತದೆ. ಮಸುಕಾದ ಜ್ಞಾನವು ಸ್ಮೃತಿಯನ್ನು ಭ್ರಂಶ (ದಿಗ್ಭ್ರಮೆ) ಗೊಳಿಸುತ್ತದೆ. ಸ್ಮೃತಿಯು ಭ್ರಮೆಗೊಳಗಾದಾಗ ಬುದ್ಧಿ ನಾಶಗೊಳ್ಳುತ್ತದೆ. ಬುದ್ಧಿಯು ಹಾಳಾದಾಗ ವ್ಯಕ್ತಿಯ ನಾಶ. ಈ ಕಾರ್ಯಕಾರಣ ಸಮೂಹವನ್ನು ಗೀತೆಯ ಎರಡನೆಯ ಅಧ್ಯಾಯದಲ್ಲಿ ಕಾಣಬಹುದು. ಮುಂದೆ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಸ್ಥಿತಪ್ರಜ್ಞ ಲಕ್ಷಣವನ್ನು ತಿಳಿಸುತ್ತಾನೆ. ಸ್ಥಿತಪ್ರಜ್ಞನು ಸಂತೋಷ ಅಥವಾ ದುಃಖದಿಂದ ಪ್ರಭಾವಿತನಾಗದೆ ಎರಡರಲ್ಲೂ ಸ್ಥಿರನಾಗಿ ಇರುತ್ತಾನೆ ಅಲ್ಲದೆ ವಿಮೋಚನೆಗೆ ಅರ್ಹನಾಗುತ್ತಾನೆ. ಆಮೆಯು ಕೈಕಾಲುಗಳನ್ನು ಒಳಕ್ಕೆ ಎಳೆದುಕೊಳ್ಳುವಂತೆ ಆತನು ವಿಷಯಗಳಿಂದ ಇಂದ್ರಿಯಗಳನ್ನು ಹಿಂತೆಗೆದುಕೊಳ್ಳಬಲ್ಲ. ಸ್ಥಿತಪ್ರಜ್ಞತೆಯು ಕ್ರಮೇಣ ಸಾಧಿತವಾಗುವಂತಹದು. ರಾಗ–ದ್ವೇಷಗಳನ್ನು ಬಿಟ್ಟು, ಇಂದ್ರಿಯಗಳನ್ನು ತನ್ನ ವಶದಲ್ಲಿ ಇಟ್ಟಿರುವ ಮನುಷ್ಯನು ಪ್ರಸನ್ನತೆಯನ್ನು ಹೊಂದುವನು. ಪ್ರಸನ್ನ ಚಿತ್ತದಿಂದ ಸಕಲ ದುಃಖಗಳು ನಾಶವಾಗುವುವು. ಏಕೆಂದರೆ ಶುದ್ಧ ಚಿತ್ತನಾದವನ ಬುದ್ಧಿಯು ಬೇಗನೆ ಸ್ಥಿರವಾಗುವುದು. ಮನಸ್ಸನ್ನು ಸಮಾಧಾನ ಮಾಡಿಕೊಳ್ಳದವನಿಗೆ ಆತ್ಮಸ್ವರೂಪವಾದ ಬುದ್ಧಿಯಾಗಲಿ, ಆತ್ಮಜ್ಞಾನದಲ್ಲಿ ಆಸಕ್ತ ಭಾವನೆಯಾಗಲಿ ಅಸಾಧ್ಯ. ಭಾವನೆ ಇಲ್ಲದವನಿಗೆ ಬಯಕೆಯಿಂದ ಶಾಂತಿ ಅಥವಾ ಚಿತ್ತ ಸಮಾಧಾನವಿಲ್ಲ. ಇಂದ್ರಿಯಗಳನ್ನು ನಿಯಂತ್ರಿಸದೆ ಹೋದತ್ತ ಬಿಡುವವನಿಗೆ ಪ್ರವಾಹವು ನಾವೆಯನ್ನು ಹೊಡೆದುಕೊಂಡು ಹೋಗುವಂತೆ ಪ್ರಜ್ಞೆ ಅಪಹೃತವಾಗುತ್ತದೆ. ಕಾಮಗಳನ್ನು ಬಿಟ್ಟು ಆಶೆಯಿಲ್ಲದವನಾಗಿ, ತನ್ನದು ಎಂಬ ಮಮತೆ ಇಲ್ಲದವನಾಗಿ, ಅಹಂಕಾರವಿಲ್ಲದವನಾಗಿ ಇರುವವನು ಶಾಂತಿಯನ್ನು ಪಡೆಯುತ್ತಾನೆ. ಆಧುನಿಕ ಮಾನವನಲ್ಲಿ ಈ ಸಮಚಿತ್ತತೆಯು ಇದೆಯೆ? ಮಾನಸಿಕ ಒತ್ತಡದ ಸ್ಥಿತಿಗೆ ಸಮಚಿತ್ತದ ಈ ಸ್ಥಿತಿಯು ಪೂರ್ಣ ವಿರುದ್ಧವಾಗಿದೆ. ಸಮಚಿತ್ತವು ನಮ್ಮ ಆಧುನಿಕ ಜೀವನಕ್ಕೆ ಅತಿ ಆವಶ್ಯಕವಾಗಿ ಬೇಕಾದ ಒಂದು ಗುರಿಯಾಗಿದೆ. ಮಹಾತ್ಮಾ ಗಾಂಧೀಜಿಯವರು ಭಗವದ್ಗೀತೆಯ ತಮ್ಮ ವ್ಯಾಖ್ಯಾನವನ್ನು ಅನಾಸಕ್ತಿಯೋಗ ಎಂದು ಕರೆದಿರುವುದು ಸೂಕ್ತವಾಗಿದೆ. ಅವರ ಪ್ರಕಾರ ಗೀತೆಯು ಆತ್ಮಸಾಕ್ಷಾತ್ಕಾರಕ್ಕೆ ಒಂದು ಮಾರ್ಗವನ್ನು ತೋರುವ ಹಾಗೂ ಹಿಂದೂಧರ್ಮದ ಎಲ್ಲ ಅಂಶಗಳನ್ನು ಅಭಿವ್ಯಕ್ತಗೊಳಿಸುವ ಗ್ರಂಥ. ಇಂತಹ ಗೀತೆಯನ್ನು ಹೆಚ್ಚಿನ ಭಾರತೀಯರು ಓದಿಲ್ಲ; ಓದಿದರೂ, ಅರ್ಥಮಾಡಿಕೊಂಡಿಲ್ಲ ಎನ್ನುವುದು ವಿಷಾದಕರ. ಇದನ್ನು ಧರ್ಮಗ್ರಂಥವಾಗಿ ಓದದೆ, ಪರಿಹರಿಸಲಾಗದ ಸಮಸ್ಯೆಗಳಿಂದ ಜರ್ಜರಿತನಾದ ಆಧುನಿಕ ಮಾನವನು ನೆಮ್ಮದಿಯಿಂದ ಬದುಕಲು ದಾರಿತೋರಿಸುವ, ಬದುಕನ್ನು ಕುರಿತ ಜಿಜ್ಞಾಸೆ ಎಂದು ಓದಬೇಕು.

ಗೀತೆಯ ಮೂರನೆಯ ಅಧ್ಯಾಯ ಪ್ರಾಯೋಗಿಕವಾದ **ಕರ್ಮಯೋಗ**ವನ್ನು ವಿವರಿಸುತ್ತದೆ. ಯಶಸ್ಸು ಮತ್ತು ವೈಫಲ್ಯದ ಬಾಂಧವ್ಯವನ್ನು ತ್ಯಜಿಸಿ, ನಮ್ಮ ನಿಗದಿತ ಕರ್ತವ್ಯವನ್ನು ನಿಸ್ವಾರ್ಥತೆಯಿಂದ ನಿರ್ವಹಿಸುವ ಸಮಚಿತ್ತತೆಯೇ ಯೋಗ. ಅಂದರೆ, ನಮಗೆ ನಮ್ಮ ಕರ್ತವ್ಯಗಳನ್ನು ಮಾಡಲು ಹಕ್ಕು ಇದೆ, ಆದರೆ ಆ ಕ್ರಿಯೆಗಳ ಫಲವನ್ನು ಪಡೆಯಲು ಅರ್ಹತೆ ಇಲ್ಲ. ನಮ್ಮ ಎಲ್ಲ ಕೆಲಸಗಳನ್ನು ದೇವರಿಗೆ ಸಮರ್ಪಿಸಬೇಕು. ಫಲಿತಾಂಶವನ್ನು ನಿರೀಕ್ಷಿಸದೆ, ಶಾಂತ ಚಿತ್ತದಿಂದ ನಮ್ಮ ಪಾಡಿಗೆ ನಾವು ನಮ್ಮ ಕೆಲಸವನ್ನು ಮಾಡಿಕೊಂಡು ಹೋಗಬೇಕು. ಕರ್ಮ ಮಾಡದೆ ಯಾರೂ ಇರಲಾರರು. ಬಂಧಿಸುವ ಕರ್ಮವನ್ನು ಬಿಟ್ಟು ಮುಕ್ತಿ ನೀಡುವ ಕರ್ಮವನ್ನು ಮಾಡುವ ಆಯ್ಕೆ ನಮ್ಮಲ್ಲಿದೆ. ಯಾರಿಂದಲೋ ಪ್ರೇರಿಸಲ್ಪಟ್ಟಂತೆ ಮಾನವನು ಏಕೆ ಪಾಪವನ್ನು ಮಾಡುತ್ತಾನೆ? ಎಂಬ ಅರ್ಜುನನ ಪ್ರಶ್ನೆಗೆ ಕೃಷ್ಣನು ರಜೋಗುಣದಿಂದ ಹುಟ್ಟಿದ ಆಸೆ, ಸಿಟ್ಟು, ಅತಿ ಪ್ರೀತಿಯೇ ನಮ್ಮ ಶತ್ರುಗಳು; ಇವುಗಳಿಂದ ನಾವು ಸ್ವಾರ್ಥಿಗಳಾಗಿ ಅಶಾಂತಿಗೆ ಗುರಿಯಾಗುತ್ತೇವೆ ಎನ್ನುತ್ತಾನೆ. ಜ್ಞಾನವು ಕಾಮದಿಂದ ಮುಚ್ಚಿದೆ; ಮನಸ್ಸು, ಬುದ್ಧಿ, ಇಂದ್ರಿಯಗಳು ಈ ಕಾಮಕ್ಕೆ ಆಶ್ರಯ. ನೀನು ಇಂದ್ರಿಯಗಳನ್ನು ವಶಮಾಡಿಕೊಂಡು, ಜ್ಞಾನ ವಿಜ್ಞಾನಗಳನ್ನು ನಾಶಮಾಡುವ ಈ ಕಾಮವೆಂಬ ಶತ್ರುವನ್ನು ಜಯಿಸು. ಇಂದ್ರಿಯಗಳಿಗಿಂತ ಮನಸ್ಸು, ಮನಸ್ಸಿಗಿಂತ ಬುದ್ಧಿ, ಬುದ್ಧಿಗಿಂತ ಆತ್ಮ ಹೆಚ್ಚಿನದು. ಆತ್ಮವನ್ನು ಆಶ್ರಯಿಸಿ, ನಮ್ಮನ್ನು ಸ್ವಾರ್ಥಿಗಳನ್ನಾಗಿಸಿ, ಶಾಂತಿಯನ್ನು ಕಸಿದುಕೊಳ್ಳುವ ಆ ಕಾಮವೆಂಬ ಶತ್ರುವನ್ನು ನಿಗ್ರಹಿಸು ಎಂದು ತಿಳಿಸುತ್ತಾನೆ. ಆಧುನಿಕ ಮಾನವನು ಕಾಮದ ರೂಪವಾದ ಹಣವನ್ನೇ ದೇವರನ್ನಾಗಿಸಿ, ತೃಪ್ತಿಗೊಳ್ಳದೆ ಅಶಾಂತನಾಗಿರುವುದನ್ನು ಕಾಣುತ್ತೇವೆ. ಕರ್ಮಯೋಗವೊಂದೇ ಶಾಂತಿಯನ್ನು ತರಬಲ್ಲುದು ಎಂಬುದನ್ನು ತಿಳಿಯುವ ಬುದ್ಧಿ



ಬರಬೇಕಿದೆ. ತಾರಕ ಮಂತ್ರವಾದ ಗಾಯತ್ರಿಯು ನಮ್ಮ ಬುದ್ಧಿಯನ್ನು ಪ್ರೇರಿಸು ಎಂಬ ಪ್ರಾರ್ಥನೆಯನ್ನು ಒಳಗೊಂಡಿರುವುದನ್ನು ಗಮನಿಸಬೇಕು. ಎಲ್ಲರೂ ಆಶಿಸುವ ಪ್ರಗತಿ ಮತ್ತು ಬೆಳವಣಿಗೆಗೆ ನಿಸ್ವಾರ್ಥ ಕರ್ಮವೊಂದೇ ಮಾರ್ಗ. ಕರ್ಮ ಎಂದರೆ ಕರ್ತವ್ಯ; ಯೋಗ ಎಂದರೆ ಒಂದಾಗುವಿಕೆ. ಬಸವಣ್ಣನವರ ಕಾಯಕ ಸಿದ್ಧಾಂತದ ಮೂಲ ಇಲ್ಲಿದೆ.

**ಜ್ಞಾನಯೋಗ**ವು ಗೀತೆಯ ನಾಲ್ಕನೆಯ ಅಧ್ಯಾಯ. ತಾನೂ ಅರ್ಜುನನೂ ಅನಾದಿಕಾಲದಿಂದ ಇರುವ, ಮುಂದೂ ಇರುವ ಆತ್ಮನೆಂದು ಹೇಳುವ ಕೃಷ್ಣನು ಧರ್ಮಕ್ಕೆ ಹಾನಿ ಉಂಟಾದಾಗ ದುರ್ಜನರನ್ನು ನಾಶಮಾಡಿ, ಸಜ್ಜನರನ್ನು ಕಾಪಾಡಿ, ಪುನಃ ಧರ್ಮವನ್ನು ಸ್ಥಾಪಿಸಲು ಪ್ರತಿ ಯುಗದಲ್ಲಿ ತಾನು ಅವತರಿಸುತ್ತೇನೆ ಎಂಬ ಭರವಸೆಯನ್ನು ನೀಡುತ್ತಾನೆ. ಈ ರಹಸ್ಯವನ್ನು ಅರಿತವರು ಪುನರ್ಜನ್ಮವಿಲ್ಲದ ಮೋಕ್ಷವನ್ನು ಪಡೆಯುತ್ತಾರೆ ಎನ್ನುತ್ತಾನೆ. ತನಗೆ ಹೆಚ್ಚು ಬೇಕು ಎಂಬ ಸ್ವಾರ್ಥಕ್ಕೆ ಕಾರಣ ತನಗೆ ಮುಂದೆ ತೊಂದರೆಯಾದರೆ ಎಂಬ ಭಯ. ಪರಮಾತ್ಮನನ್ನು ಆಶ್ರಯಿಸಿದವರು ಮಾತ್ರ ಈ ಭಯದಿಂದ ಪಾರಾಗುವರು. ಅವರಿಗೆ ನಿಷ್ಕಾಮ ಕರ್ಮ ಸಾಧ್ಯ. ಯಜ್ಞದೃಷ್ಟಿಯಿಂದ ಮಾಡಿದ ನಿಷ್ಕಾಮ ಕರ್ಮವು ಬಂಧನಕ್ಕೆ ಕಾರಣವಾಗುವುದಿಲ್ಲ. ಜ್ಞಾನ, ಶ್ರದ್ಧೆಗಳಿಲ್ಲದ ಸಂಶಯಾತ್ಮನಿಗೆ ಇಹಲೋಕ-ಪರಲೋಕಗಳಿಲ್ಲ, ಸುಖವೂ ಇಲ್ಲ - ಅವನು ನಾಶವಾಗುತ್ತಾನೆ. ಆಧುನಿಕತೆಯ ಶಾಪವೇ ಸಂಶಯ, ಅಪನಂಬಿಕೆ; ಕೃಷ್ಣನ ಈ ಮಾತು ಅವರಲ್ಲಿ ಎಚ್ಚರ ಮೂಡಿಸುವಂತಿದೆ.

**ಸಂನ್ಯಾಸಯೋಗ** ಎಂಬ ಐದನೆಯ ಅಧ್ಯಾಯದಲ್ಲಿ ಕೃಷ್ಣನು ಅರ್ಜುನನಿಗೆ ಅಹಂಕಾರವನ್ನು ತ್ಯಜಿಸಿ, ನಿಷ್ಕಾಮ ಕರ್ಮ ಮಾಡು ಎಂದು ಹೇಳುತ್ತಾನೆ. ಕರ್ಮ ಮಾಡುತ್ತಲೇ ಫಲಕ್ಕೆ ಆಸೆ ಪಡದೆ ಸಂನ್ಯಾಸಿಯಂತಿರುವುದು ಹೇಗೆ ಎಂಬುದು ಅರ್ಜುನನ ಪ್ರಶ್ನೆ. ಫಲವನ್ನು ದೇವರಿಗೆ ಬಿಟ್ಟು ಕೆಲಸ ಮಾಡುವ ಮನಸ್ಥಿತಿಯಿಂದ ಕರ್ಮಯೋಗಿಯು ಸ್ವನಿಯಂತ್ರಣವನ್ನು ಸಾಧಿಸಿ, ಅಹಂಕಾರದಿಂದ ಹೊರಬರಬಲ್ಲ ಎನ್ನುತ್ತಾನೆ ಕೃಷ್ಣ. ಇಲ್ಲಿ ತಾವರೆ ಎಲೆಯು ಹೇಗೆ ನೀರಿನಿಂದ ಲಿಪ್ತವಾಗುವುದಿಲ್ಲವೋ ಹಾಗೆ ಜ್ಞಾನಿಯು ತನ್ನ ಕರ್ಮದಿಂದ ಬಂಧಿತನಾಗುವುದಿಲ್ಲ ಎನ್ನುವ ಉಪಮೆ ಮನಮುಟ್ಟುವಂತಿದೆ. ಆಧುನಿಕರಲ್ಲಿ ಯಾವುದರ ಜೊತೆಗೆ ಗುರುತಿಸಿಕೊಳ್ಳುವುದು ಸರಿ ಎಂಬುದರ ಬಗ್ಗೆ ಸಮಸ್ಯೆ ಇದೆ. ಸಾಮಾನ್ಯವಾಗಿ ತಾನು ಹೊಂದಿರುವ ವಸ್ತು ಗಳ ಜೊತೆಗೆ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಇದಕ್ಕಿಂತ ತಾನು ಮಾಡಬಲ್ಲ ಕೆಲಸದ ಜೊತೆಗೆ ಗುರುತಿಸಿಕೊಳ್ಳುವುದು ಮೇಲಿನ ಹಂತ. ತನ್ನ ಅಂತರಂಗದ ಆತ್ಮದ ಜೊತೆಗೆ ಗುರುತಿಸಿಕೊಳ್ಳುವುದು ಇನ್ನೂ ಮೇಲಿನದು, ಯೋಗಿಗಳಿಗೆ ಮಾತ್ರ ಸಾಧ್ಯ. ಇಲ್ಲಿನ ಇನ್ನೊಂದು ವಿಚಾರವಾದ ಸಮದರ್ಶಿತ್ವ, ಸರ್ವಭೂತ ಹಿತ ಅಂತಹ ಯೋಗಿಗಳ ಗುಣ. ಕಾಮ, ಕ್ರೋಧದಿಂದ ಬಿಡುಗಡೆ ಹೊಂದಿ, ಮನೋನಿಯಂತ್ರಣ ಸಾಧಿಸಿದ, ಆತ್ಮನನ್ನು ಸರಿಯಾಗಿ ತಿಳಿದುಕೊಂಡ ಯತಿಗಳಿಗೆ ಶಾಶ್ವತವಾದ ಬ್ರಹ್ಮನಿರ್ವಾಣ ಸಿದ್ಧಿಸುತ್ತದೆ ಎನ್ನುತ್ತಾನೆ ಕೃಷ್ಣ. ಮನಸ್ಸು ಮತ್ತು ಅದರ ನಿಗ್ರಹ ಇಂದಿನ ಸಮಸ್ಯೆ ಕೂಡ.

ಆರನೆಯ ಅಧ್ಯಾಯ **ಧ್ಯಾನಯೋಗ.** ಯೋಗವನ್ನು ಸಾಧಿಸಬಯಸುವ ಮುನಿಗೆ ಸಂಕಲ್ಪವನ್ನು ತ್ಯಾಗ ಮಾಡಿದ ಕರ್ಮವೇ ಸಾಧನ. ಇಲ್ಲಿನ ಪ್ರಸಿದ್ಧ ಹೇಳಿಕೆ:

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।**
**ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥**

(ತನ್ನ ಮನಸ್ಸಿನಿಂದಲೇ ತನ್ನನ್ನು ಉದ್ಧಾರ ಮಾಡಿಕೊಳ್ಳಬೇಕು. ತನ್ನನ್ನು ಕುಗ್ಗಿಸಿಕೊಳ್ಳಬಾರದು. ಏಕೆಂದರೆ ಮನಸ್ಸೇ ತನ್ನ ಬಂಧು, ಮನಸ್ಸೇ ತನ್ನ ಶತ್ರು.) ನಾವು ದೇಹಕ್ಕೆ ಕೊಡುವಷ್ಟು ಗಮನವನ್ನು ಮನಸ್ಸಿಗೆ ಕೊಡುವುದಿಲ್ಲ. ಜಿತೇಂದ್ರಿಯನಿಗೆ ಮನಸ್ಸು ಬಂಧು, ಹಾಗಿಲ್ಲದವನಿಗೆ ಶತ್ರು. ಸಾಧಕನು ಏಕಾಂಗಿಯಾಗಿದ್ದು, ದೇಹ ಮನಸ್ಸುಗಳನ್ನು ಬಿಗಿಹಿಡಿದು, ಪರಮಾತ್ಮನಲ್ಲಿ ಮನಸ್ಸನ್ನು ಕೂಡಿಸಬೇಕು. ಪ್ರಯತ್ನಪೂರ್ವಕವಾಗಿ ದೇಹೇಂದ್ರಿಯಗಳನ್ನು, ಮನಸ್ಸನ್ನು ಗೆಲ್ಲಬೇಕು. ಅಂತಹ ಯೋಗಿಯ ಅಪರಿಗ್ರಹ ಮೊದಲಾದ ಗುಣಗಳು, ಅವನ ಸಾಧನೆಯ ವಿವರ, ಅದರಿಂದ ಹೊಂದುವ ಬ್ರಹ್ಮಸಂಸ್ಪರ್ಶವೆಂಬ ಸುಖ, ಸಾಕ್ಷಾತ್ಕಾರ ಇವನ್ನು ಕೃಷ್ಣ ವಿವರವಾಗಿ ಹೇಳುತ್ತಾನೆ. ಅರ್ಜುನನ ಪ್ರತಿಕ್ರಿಯೆ ಆಧುನಿಕ ಮಾನವನದ್ದೇ: 'ಎಲೈ ಕೃಷ್ಣ, ಮನಸ್ಸು ಚಂಚಲವಾದದ್ದು, ಕ್ಷೋಭೆಯನ್ನು ಉಂಟುಮಾಡುವ ಸ್ವಭಾವವುಳ್ಳದ್ದು ಮತ್ತು ದೃಢವಾದದ್ದು; ಅದರ ನಿಗ್ರಹವು ವಾಯುವಿನ ನಿಗ್ರಹದಂತೆ ಅತ್ಯಂತ ಕಷ್ಟ. ನೀನು ಹೇಳಿದ ಯೋಗವನ್ನು ತಿಳಿಯಲಾಗುತ್ತಿಲ್ಲ.' ಅಲ್ಲದೆ, ಶ್ರದ್ಧೆಯಿದ್ದೂ ಪ್ರಯತ್ನ ಮಾಡದವನಿಗೆ, ಯೋಗದಿಂದ ಚ್ಯುತನಾದ ಯೋಗಭ್ರಷ್ಟನಿಗೆ ಗತಿ ಏನು? ಎಂದು ಅರ್ಜುನ ಪ್ರಶ್ನಿಸುತ್ತಾನೆ. ಅವನಿಗೆ ವಿನಾಶವಿಲ್ಲ, ಒಳ್ಳೆಯ ಮನೆತನದಲ್ಲಿ ಹುಟ್ಟಿ, ಪೂರ್ವಸಂಸ್ಕಾರದಿಂದ ಮತ್ತೆ ಮುಂದುವರಿಯುತ್ತಾನೆ ಎಂದು ಕೃಷ್ಣನು ಭರವಸೆ ನೀಡುತ್ತಾನೆ. ಅಲ್ಲದೆ

ಬುದ್ಧಿಯಿಂದ ಮೆಲ್ಲಮೆಲ್ಲನೆ ಕಾಮತ್ಯಾಗ, ಇಂದ್ರಿಯ ನಿಗ್ರಹಗಳನ್ನು ಸಾಧಿಸಿ, ಆತ್ಮಧ್ಯಾನಕ್ಕೆ ಹಿಂದಿರುಗಬೇಕು ಎಂದು ಅಭ್ಯಾಸಯೋಗವನ್ನು ಉಪದೇಶಿಸುತ್ತಾನೆ.

ಭಗವಾನ್ ರಮಣ ಮಹರ್ಷಿಗಳ ಉಪದೇಶ — 'ನಾನು ಯಾರು?' ಎಂದು ಶೋಧಿಸುತ್ತ ಹೋಗಬೇಕೆಂಬುದು. ನಿನಗೆ ನೀನು ಯಾರೆಂಬುದು ಧ್ಯಾನದಿಂದ ಅರಿವಾಗಬೇಕು; ಸಾಧನೆಗೆ ದೈವ ಬೆಂಬಲ ಇದ್ದೇ ಇದೆ ಎಂಬುದನ್ನು ಏಳನೆಯ ಅಧ್ಯಾಯ ತಿಳಿಸುತ್ತದೆ. ಯಾವುದನ್ನು ತಿಳಿದುಕೊಂಡಮೇಲೆ ಪುನಃ ತಿಳಿಯಬೇಕಾದದ್ದು ಇರುವುದಿಲ್ಲವೋ ಅಂತಹ ಸ್ವಾನುಭವದ ಜ್ಞಾನ ಇದು. ಅಜ್ಞಾನದಿಂದ ನಮ್ಮ ನೈಜ ಸತ್ವವನ್ನು ಮರೆತು, ನಾವು



ದುರ್ಬಲರು ಎಂದುಕೊಳ್ಳುತ್ತೇವೆ. ತ್ರಿಗುಣಮಯವಾದ ನನ್ನ ದೈವೀಮಾಯೆಯನ್ನು ದಾಟಲು ದುರ್ಬಲರಿಗೆ ಅಸಾಧ್ಯ; ಆದರೆ ನನ್ನನ್ನೇ ಆಶ್ರಯಿಸಿದವರು ದಾಟಬಲ್ಲರು. ಜ್ಞಾನಿಯು ತನ್ನಲ್ಲಿ ಲೀನವಾಗುತ್ತಾನೆ ಎನ್ನುತ್ತಾನೆ ಕೃಷ್ಣ. ಈಚಿನವರಲ್ಲಿ ಧ್ಯಾನದ ಬಗ್ಗೆ ಒಲವು ಹೆಚ್ಚುತ್ತಿದೆ. ಧ್ಯಾನವು ಆಳವಾದ ವಿಶ್ರಾಂತಿಯ ವಿಧಾನ ಎಂದು ಕೆಲವರು ಭಾವಿಸಿದರೂ, ಅದು ಆತ್ಮಸಾಕ್ಷಾತ್ಕಾರದ ಮಾರ್ಗ ಎಂಬ ಅರಿವು ಅನುಭವದಿಂದ ದೊರೆಯುತ್ತದೆ. ಮುಂದಿನ ಮೂರು ಅಧ್ಯಾಯಗಳೂ ಧ್ಯಾನದ ಬಗೆಗಿನ ವಿವರಗಳಿಂದ ಕೂಡಿವೆ.

ಅಭಿನಿವೇಶ ಅಥವಾ ನಾನು ಇಲ್ಲವಾದರೆ ಗತಿ ಏನು ಎಂಬ ಭಯ ಎಲ್ಲರನ್ನೂ ಕಾಡುತ್ತದೆ. ಕೃಷ್ಣನು ಎಂಟನೆಯ ಅಧ್ಯಾಯದಲ್ಲಿ ಮರಣದ ಸಮಯದಲ್ಲಿ ನನ್ನನ್ನು ಸ್ಮರಿಸುವವನು ನನ್ನನ್ನೇ ಹೊಂದುತ್ತಾನೆ ಎಂಬ ಅಭಯವನ್ನು ನೀಡುತ್ತಾನೆ. ಅಲ್ಲದೆ ನನ್ನನ್ನು ಸ್ಮರಿಸುತ್ತಾ ಯುದ್ಧ ಮಾಡು (ಮಾಮನುಸ್ಮರ ಯುಧ್ಯ ಚ) ನನ್ನನ್ನು ಹೊಂದುವೆ ಎನ್ನುತ್ತಾನೆ. ದೇವರ ಧ್ಯಾನದಲ್ಲಿ ತೊಡಗಿರುವವನಿಗೆ ಅವನು ಸಿಕ್ಕೇ ಸಿಕ್ಕುತ್ತಾನೆ, ಪ್ರಯತ್ನ ಬಿಡಕೂಡದು.

ಅವ್ಯಕ್ತನಾದ ನನ್ನಿಂದ ಈ ಜಗತ್ತು ತುಂಬಿರುವುದು; ಎಲ್ಲ ವಸ್ತುಗಳೂ ನನ್ನಲ್ಲಿ ಇರುವುವು. ನನ್ನನ್ನು ತಮ್ಮ ಆತ್ಮವೆಂದು ಧ್ಯಾನಿಸುವವರ ಯೋಗಕ್ಷೇಮವನ್ನು ನಾನು ವಹಿಸುವೆನು; ಹಾಗೆ ನನ್ನಲ್ಲೇ ಮನಸ್ಸಿಟ್ಟು ಧ್ಯಾನಿಸುವವರು ನನ್ನನ್ನೇ ಸೇರುವರು ಎಂಬ ಭರವಸೆ ಒಂಬತ್ತನೆಯ ಅಧ್ಯಾಯದಲ್ಲಿದೆ.

ಧ್ಯಾನಿಸುವುದು ಹೇಗೆ? ಯಾವಯಾವ ಭಾವಗಳಲ್ಲಿ ನಿನ್ನನ್ನು ಧ್ಯಾನಿಸಲಿ ಎಂಬ ಅರ್ಜುನನ ಪ್ರಶ್ನೆಗೆ ತನ್ನ ವಿಭೂತಿಯನ್ನೂ, ಯೋಗವನ್ನೂ ತಿಳಿಯುವ ಕ್ರಮವನ್ನು ಕೃಷ್ಣನು ಹತ್ತನೆಯ ಅಧ್ಯಾಯದಲ್ಲಿ ತಿಳಿಸುತ್ತಾನೆ. ವಿಭೂತಿಯುಳ್ಳ, ಶ್ರೀಯುಕ್ತವಾದ, ಉತ್ಸಾಹದಿಂದ ಕೂಡಿದ ವಸ್ತುಗಳೆಲ್ಲದರಲ್ಲೂ ತನ್ನ ತೇಜಸ್ಸಿನ ಅಂಶವು ಇದೆ ಎನ್ನುತ್ತಾನೆ. ಕರ್ಮಕ್ಕೆ ತಕ್ಕ ಫಲವನ್ನು ನೀಡುತ್ತೇನೆ ಸಂಶಯ ಬೇಡ ಎಂಬ ಭರವಸೆಯೂ ಇಲ್ಲಿದೆ.

ಸ್ವಾನುಭವದಿಂದ ಮಾತ್ರ ಸಂಶಯ ನಿವಾರಣೆಯಾಗುವುದು. ಈಶ್ವರತ್ವದ ರೂಪವನ್ನು ನೋಡುವ ಆಸೆಯನ್ನು ಅರ್ಜುನ ಹೇಳಿದಾಗ, ಕೃಷ್ಣನು ತನ್ನ ಅನಾದಿ, ಅನಂತ, ಪ್ರಕಾಶಿಸುವ ವಿಶ್ವರೂಪವನ್ನು ತೋರಿಸುತ್ತಾನೆ. ನೋಡಲಾರದೆ ನೋಡಿದ ಅರ್ಜುನ ಬೆರಗಾಗಿ ಸಂಪೂರ್ಣವಾಗಿ ಶರಣಾಗುತ್ತಾನೆ, ಅರಿಯದೆ ಸಖನೆಂದು ಸಲಿಗೆ ತೋರಿದ್ದಕ್ಕೆ ಕ್ಷಮೆ ಯಾಚಿಸುತ್ತಾನೆ. ಸಂಶಯವು ಆಧುನಿಕತೆಯ ಜಾಡ್ಯ. ಇದನ್ನು ಹೋಗಲಾಡಿಸಲು, ಧ್ಯಾನವೊಂದೇ ಮಾರ್ಗ. ಯಾರು ನನಗಾಗಿಯೇ ಕರ್ಮಗಳನ್ನು ಮಾಡುವನೋ, ನನ್ನನ್ನೇ ಪರಮಗತಿಯೆಂದು ತಿಳಿದಿರುವನೋ, ನನ್ನ ಭಕ್ತನೋ, ಸಂಗರಹಿತನೋ, ಸಮಸ್ತ ಭೂತಗಳಲ್ಲಿ ವೈರವಿಲ್ಲದವನೋ ಅವನು ನನ್ನನ್ನೇ ಸೇರುತ್ತಾನೆ ಎಂಬ ಇಡೀ ಗೀತೆಯ ಸಾರವನ್ನು ಹನ್ನೊಂದನೆಯ ಅಧ್ಯಾಯದಲ್ಲಿ ಕೃಷ್ಣನು ತಿಳಿಸುತ್ತಾನೆ.

ಹನ್ನೆರಡನೆ ಅಧ್ಯಾಯದಲ್ಲಿ ವಿವೇಕ ವೈರಾಗ್ಯಗಳಿಂದ ಕೂಡಿ, ವಿಶ್ವರೂಪವನ್ನು ಧ್ಯಾನಿಸಿ ಉಪಾಸಿಸುವರು ಯೋಗಿಗಳು; ಹಾಗೆ ಮಾಡುವುದು ಕಷ್ಟವಾದರೆ ಭಗವಂತನ ಪ್ರೀತಿಗಾಗಿ ಕರ್ಮಗಳನ್ನು ಮಾಡು; ಅದೂ ಕಷ್ಟವಾದರೆ ಕರ್ಮಗಳ ಫಲಗಳ ಬಯಕೆಗಳನ್ನು ಬಿಟ್ಟುಬಿಡು ಎಂಬ ಅಭ್ಯಾಸಯೋಗವನ್ನು ಕೃಷ್ಣ ತಿಳಿಸುತ್ತಾನೆ. ಹಂತಹಂತವಾಗಿ ಸಾಧನೆಯಲ್ಲಿ ಮುಂದುವರಿಯುವುದರ ಮಹತ್ವ ಇಲ್ಲಿದೆ. ಆರನೆಯ ಅಧ್ಯಾಯದ **ಶನೈಃ ಶನೈರುಪರಮೇತ್**... ಶ್ಲೋಕದ ಭಾವ ಇಲ್ಲಿ ವಿಸ್ತೃತವಾಗಿ ಇದೆ.

ಸಾಧಕನ ಗುಣಗಳು, ಸಾಧನೆಯ ಗುರಿಯಾದ ಜ್ಞಾನ-ಜ್ಞೇಯಗಳ ಸ್ವರೂಪ ಇವುಗಳನ್ನು ಹದಿಮೂರನೆಯ ಅಧ್ಯಾಯದಲ್ಲಿ ವಿವರಿಸಿದೆ. ನಮ್ಮೊಳಗೇ ಇದ್ದು, ನಮ್ಮ ಅನುಭವಗಳಿಂದ ಲಿಪ್ತವಾಗದ ಭಗವಂತನನ್ನು ಅರಿತುಕೊಳ್ಳುವುದು ನಮ್ಮ ಉದ್ದೇಶವಾಗಬೇಕು. ಆಧುನಿಕತೆ ನಮ್ಮನ್ನು ಹೊರಕ್ಕೆ ಎಳೆಯುತ್ತದೆ; ಆದರೆ ನಾವು ಅಂತರಂಗದ ಶೋಧನೆಯಲ್ಲಿ ತೊಡಗಬೇಕಿದೆ.

ನಡತೆ ವಿಧಿಯನ್ನು ನಿರ್ಣಯಿಸುತ್ತದೆ (Character determines destiny) ಎನ್ನುವ ನುಡಿಗಟ್ಟು ಎಲ್ಲರಿಗೂ

ತಿಳಿದದ್ದೆ. ಈ ನಡತೆಯ ಮೂಲ ಎಲ್ಲರಲ್ಲೂ ಇರುವ ಮೂರು ಗುಣಗಳು. ಇವನ್ನು ವಿವರಿಸುವುದು ಹದಿನಾಲ್ಕನೆಯ ಅಧ್ಯಾಯ. ಬೆಳಕಿನ, ಸುಖದ, ವಿಚಾರದ ರೂಪವಾದ ಸತ್ವ ಗುಣ; ಪ್ರೀತಿ, ಬಯಕೆ, ಅಹಂಕಾರಗಳ ರೂಪವಾದ ರಜೋಗುಣ; ಅಜ್ಞಾನ, ತಪ್ಪು ತಿಳಿವಳಿಕೆ, ಆಲಸ್ಯದ ರೂಪವಾದ ತಮೋಗುಣ– ಇವುಗಳಲ್ಲಿ ಶಕ್ತವಾದದ್ದು ಮೇಲುಗೈ ಸಾಧಿಸಿ, ಆತ್ಮವನ್ನು ಕಟ್ಟಿಹಾಕುತ್ತದೆ. ಸಾತ್ವಿಕನು ಮುಕ್ತನಾಗುವನು ಅಥವಾ ಮೇಲ್ಮಟ್ಟದ ಜನ್ಮವನ್ನು, ರಾಜಸಿಕನು ಮಧ್ಯಮ ಜನ್ಮವನ್ನು, ತಾಮಸಿಕನು ಕೆಳಮಟ್ಟದ ಜನ್ಮವನ್ನು ಹೊಂದುತ್ತಾರೆ ಎನ್ನುತ್ತಾನೆ ಕೃಷ್ಣ. ಸತ್ವಕ್ಕೆ ನಿರ್ಮಲತೆ, ರಜಸ್ಸಿಗೆ ದುಃಖ, ತಮಸ್ಸಿಗೆ ಅಜ್ಞಾನ ಫಲವೆನ್ನುವುದು ಸಾಮಾನ್ಯ ತರ್ಕಕ್ಕೆ ಹೊಂದುವ ವಿಚಾರವಾದುದರಿಂದ, ನಾವು ಸಾತ್ವಿಕ ಕರ್ಮಗಳನ್ನು ಆಚರಿಸಿ, ಸಾತ್ವಿಕರಾಗೋಣ ಎನ್ನುವ ಬಯಕೆ ಮೂಡುತ್ತದೆ. ಅಲ್ಲದೆ, ಯಾವ ದೃಷ್ಟಿಕೋನದ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಸಾಧಕರನ್ನು ಮೂರು ವಿಧವಾಗಿ ವಿಂಗಡಿಸಿ ಸಾತ್ವಿಕನು ಹೇಗಿರುವನೆಂಬುದರ ವಿವರಣೆ ಇದೆ. ಎರಡನೆಯ ಅಧ್ಯಾಯದ ಸ್ಥಿತಪ್ರಜ್ಞ ಲಕ್ಷಣ ಹಾಗೂ ಈ ವಿವರಣೆಗಳನ್ನು ಒಟ್ಟುಗೂಡಿಸಿದಲ್ಲಿ, ಆದರ್ಶ ಸಾಧಕ ಹೇಗಿರಬೇಕೆಂಬ ಚಿತ್ರ ಸಿಗುತ್ತದೆ. ತಾನು ಎಲ್ಲಿರುವೆನೆಂದು ಸಾಧಕನು ನೋಡಿಕೊಳ್ಳಬಹುದು.

ಹದಿನೈದನೆಯ ಅಧ್ಯಾಯದಲ್ಲಿ ತಲೆಕೆಳಗಾದ ಅರಳಿಮರದಂತೆ ಸಂಸಾರ ವೃಕ್ಷವಿದೆ ಎಂದು ವಿವರಿಸಿದೆ. ಪಾಪ-ಪುಣ್ಯಗಳ ಕರ್ಮಗಳನ್ನು ಅಂಟಿಸುವ ಒಳಬೇರುಗಳು ಮೇಲೆ-ಕೆಳಗೆ ಹರ



ಡಿವೆ; ಸುಖದ ಬಯಕೆಗಳೆ ಚಿಗುರುಗಳು. ಆದಿಅಂತ್ಯವಿಲ್ಲದ ಇದನ್ನು ಅಸಂಗ ಅಥವಾ ವೈರಾಗ್ಯವೆಂಬ ಶಸ್ತ್ರದಿಂದ ಕತ್ತರಿಸಬೇಕು. ದೈವತ್ವವನ್ನು ವಿವರಿಸಿ, ಅದಕ್ಕೆ ಬೆಲೆ ಕೊಟ್ಟಾಗ ಸಾವು, ಮರುಹುಟ್ಟುಗಳ ಬಲೆಯಿಂದ ಬಿಡಿಸಿಕೊಳ್ಳುವುದು ಸಾಧ್ಯ ಎನ್ನುತ್ತಾನೆ.

ಹದಿನಾರು-ಹದಿನೇಳನೆಯ ಅಧ್ಯಾಯದಲ್ಲಿ ಎರಡು ರೀತಿಯ ಮಾನವರನ್ನು, ಅವರ ಗುಣಲಕ್ಷಣಗಳನ್ನು ವಿವರಿಸಲಾಗಿದೆ. ಕೃಷ್ಣನು ಜನರಲ್ಲಿನ ದೈವೀ ಹಾಗೂ ಆಸುರೀ ಸಂಪತ್ತುಗಳ ಗುಣಲಕ್ಷಣಗಳು, ಅವರು ಮಾಡುವ ಯಜ್ಞಗಳ ಬಗೆಗಳನ್ನು ಹೇಳುತ್ತಾನೆ. ಸಾತ್ವಿಕವಾದ ಕಾಯಿಕ, ವಾಚಿಕ, ಮಾನಸ ತಪಸ್ಸುಗಳ, ದಾನ, ಕರ್ಮಗಳ ವಿವರಣೆ ಸ್ಥಿತಪ್ರಜ್ಞನ ಲಕ್ಷಣಗಳ ಮುಂದುವರಿಕೆ ಎನ್ನಿಸುತ್ತದೆ. ಅಹಂಕಾರ, ಸಿಟ್ಟು, ಕ್ರೂರತೆ, ಅಜ್ಞಾನ, ಅಪ್ರಾಮಾಣಿಕತೆ, ದುರಾಸೆ, ಅನೈತಿಕತೆ ಮೊದಲಾದವು ವ್ಯಕ್ತಿಯನ್ನು ಆಧ್ಯಾತ್ಮಿಕವಾಗಿ ನಾಶ ಮಾಡಿದರೆ, ವಿನಯ, ಅಹಿಂಸೆ, ಸತ್ಯ, ತಾಳ್ಮೆ, ಇಂದ್ರಿಯ ನಿಗ್ರಹಗಳು ದೈವೀ ಗುಣಗಳಾಗಿದ್ದು, ಜ್ಞಾನಕ್ಕೆ ಕಾರಣವಾಗಿ, ಮಾನವನನ್ನು ಸ್ವತಂತ್ರರನ್ನಾಗಿಸುತ್ತದೆ. ಇಲ್ಲಿ ಕೆಟ್ಟ ಗುಣಗಳು ಹಾಗೂ ಉತ್ತಮವಾದ ಆತ್ಮಗುಣಗಳನ್ನು ಹೋಲಿಸಿದೆ. ಆಧುನಿಕರಲ್ಲಿ ಹಲವರನ್ನು ವಿವರಿಸಿದ್ದಾನೆಯೋ ಎನ್ನಿಸುವಂತಿದೆ. ಮೇರು ಸತ್ಯವಾದ ಬ್ರಹ್ಮಕ್ಕೆ **ಓಂ ತತ್ ಸತ್** ಎಂಬ ಮೂರು ವಿಧದ ನಿರ್ದೇಶವಿರುವುದನ್ನು, ಇದರಲ್ಲಿ ಓಂಕಾರದಿಂದ ಸತ್ಕಾರ್ಯವನ್ನು ಆರಂಭಿಸಬೇಕು ಎಂದಿದೆ.

ಪರಮಾತ್ಮನೊಡನೆ ಐಕ್ಯ ಹದಿನೆಂಟನೆ ಅಧ್ಯಾಯದ ತಿರುಳು. ಫಲದ ಆಸೆಯಿಂದ ಕರ್ಮಗಳನ್ನು ಮಾಡುವುದನ್ನು ಬಿಡುವುದು ಸಂನ್ಯಾಸ; ಫಲವನ್ನು ಬಯಸದೆ ಎಲ್ಲ ಕರ್ಮಗಳನ್ನು ಮಾಡುವುದು ತ್ಯಾಗ. ಯಜ್ಞ ದಾನ ತಪಸ್ಸುಗಳನ್ನು, ನಿತ್ಯಕರ್ಮವನ್ನು ಬಿಡಲಾಗದು. ಕೊನೆಗೆ ಕರ್ಮಯೋಗಿಯಾಗಿ ಬದುಕಬೇಕು. ಕರ್ಮದ ಐದುಕಾರಣಗಳು, ಸಾತ್ವಿಕ, ರಾಜಸಿಕ, ತಾಮಸಿಕ ಜ್ಞಾನ, ಕರ್ಮಗಳ ವಿವರಣೆ ಇದೆ. ಒಳಗೆ ಇದ್ದು ನಿಮ್ಮನ್ನು ಗೊಂಬೆಯಂತೆ ಆಡಿಸುತ್ತಾನೆ ಪರಮಾತ್ಮ. ಅವನೊಡನೆ ಐಕ್ಯವಾಗುವುದು ಹೇಗೆಂಬ ವಿವರವಿದೆ. ಕೊನೆಗೆ ಮೋಹದಿಂದ ಬಿಡುಗಡೆ ಹೊಂದಿದ ಅರ್ಜುನನು 'ಕರಿಷ್ಯೇ ವಚನಂ ತವ' ಎಂದು ಶರಣಾಗುತ್ತಾನೆ.

ಆಧುನಿಕ ಮಾನವ ಸುತ್ತೆಲ್ಲ ಪರಿಹಾರವಿಲ್ಲದ ಸಮಸ್ಯೆಗಳನ್ನು ಕಂಡು, ಅಶಾಂತಿ, ಅಸುಖಗಳ ಜೀವನ ನಡೆಸುತ್ತಿದ್ದಾನೆ. ಅವನ ಅಸ್ತಿತ್ವ ದುಃಖದಲ್ಲಿ ತೇಲಾಡುವಾಗ, ಭಗವದ್ಗೀತೆ ಅವನಿಗೆ ಅಸ್ತಿತ್ವದ ಸ್ವಭಾವವನ್ನು ಪ್ರಜ್ಞಾಪೂರ್ವಕವಾಗಿ, ಎಚ್ಚರಗೊಳ್ಳುವಂತೆ ತಿಳಿಸುತ್ತದೆ. ಇಲ್ಲಿ ನೀತಿಯನ್ನು ಮೇಲುಮೇಲಿನ ಹಂತದಲ್ಲಿ ನೀಡದೆ, ಆಳವಾಗಿ ಸುತ್ತಲಿನ ಉದಾಹರಣೆಗಳ ಮೂಲಕ ವಿಶದಪಡಿಸುತ್ತದೆ. ಯೋಚನಾಕ್ರಮ ಬದಲಾದಾಗ, ನಮ್ಮ ಕ್ರಿಯೆಯಲ್ಲಿ ಗುಣಾತ್ಮಕ ಬದಲಾವಣೆಯಾಗಿ, ಪರಿಣಾಮದ ಬಗೆಗಿನ ನಮ್ಮ ಪ್ರತಿಕ್ರಿಯೆಯೂ ಬದಲಾಗುತ್ತದೆ. ನವತರುಣರಲ್ಲಿ ಪ್ರೇರಣೆಯ ಅಥವಾ ಏಕಾಗ್ರತೆಯ ಕೊರತೆ ಮತ್ತು ಒತ್ತಡದಿಂದ ಹೊರಬರಲಾರದ ಸ್ಥಿತಿಯನ್ನು ಕಾಣಬಹುದು. ಭಯ, ಆತಂಕ, ಸಂದಿಗ್ಧತೆ, ಕೋಪ, ಖಿನ್ನತೆ, ಚಡಪಡಿಸುವಿಕೆ, ಹಿಂಸೆ ಸಾಮಾನ್ಯವಾಗಿದೆ. ನಮ್ಮ ಯೋಚನೆಗಳನ್ನು ನಾವು ಅರ್ಥ ಮಾಡಿಕೊಂಡು ಸ್ವಪ್ರೇರಣೆ ಹೊಂದುವುದನ್ನು ಗೀತೆ ಕಲಿಸುತ್ತದೆ. ಕುಶಲತೆಯಿಂದ ಕರ್ಮ ಮಾಡುವುದು, ಬುದ್ಧಿಯನ್ನು ಆಶ್ರಯಿಸುವುದು (**ಯೋಗಃ ಕರ್ಮಸು ಕೌಶಲಂ; ಬುದ್ಧೌ ಶರಣ**



**ಮನ್ನಿಚ್ಛ)** ಸಮತ್ವದಿಂದ ಕರ್ತವ್ಯ ನಿರ್ವಹಿಸುವುದು-ಆಧುನಿಕರಿಗೆ ಆಗುವ ಎಲ್ಲ ರೀತಿಯ ಪಾಠಗಳನ್ನು ಗೀತೆ ನೀಡುತ್ತದೆ. ಗೀತೆಯ ಈ ಬಗೆಯ ಸಾರ್ವಕಾಲಿಕತೆಯೆ ಅದನ್ನು ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ಮುಖ್ಯವಾಗಿಸಿರುವುದು. ಗೀತೆಯ ಬಗೆಗೆ ಅನೇಕ ತಪ್ಪು ತಿಳಿವಳಿಕೆಗಳಿವೆ; ಗೀತೆಯು ಅರ್ಜುನನಿಗೆ ನಿನ್ನ ಕರ್ತವ್ಯವನ್ನು ಮಾಡು, ಆಸೆಯನ್ನು ಬಿಡು, ಪ್ರಪಂಚದಿಂದ ಕಳಚಿಕೋ, ಆಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ನೀಡು, ಎಂದು ಉಪದೇಶಿಸುತ್ತದೆ ಎಂದು. ಮೇಲೆ ಸಂಗ್ರಹವಾಗಿ ಗೀತೆಯನ್ನು ನೋಡಿದಂತೆ ಇವೆಲ್ಲ ತಪ್ಪು ತಿಳಿವಳಿಕೆಗಳೇ ಆಗಿವೆ. ಗೀತೆಯು ನಾನು ಯಾರು? ಎಂದು ತಿಳಿಯಲು ಪ್ರಯತ್ನಿಸು ಎನ್ನುತ್ತದೆ. ಆಸೆಯನ್ನು ಬಿಡು ಎನ್ನುವುದಕ್ಕಿಂತ ನಿಯಂತ್ರಣವಿರಲಿ ಎನ್ನುತ್ತದೆ. ಒಬ್ಬರ ಕರ್ಮ ಇನ್ನೊಬ್ಬರ ಮೇಲೆ ಪರಿಣಾಮ ಮಾಡುವಂತೆ ನಾವೆಲ್ಲ ಒಬ್ಬರಿಗೊಬ್ಬರು ಸಂಬಂಧಿತರಾಗಿದ್ದೇವೆ. ಅಸೂಯೆ, ದ್ವೇಷ ಮೊದಲಾದ ಕೆಟ್ಟ ಭಾವನೆಗಳಿಂದ ನಮ್ಮ ಭಾವಲೋಕವನ್ನು ಬಿಡಿಸಿಕೊಳ್ಳಬೇಕೆಂಬುದನ್ನು ಗೀತೆ ತಿಳಿಸುತ್ತದೆ. ದೈನಂದಿನ ಜೀವನವನ್ನು ನಿಮ್ಮ ಆಸೆಯನ್ನು ನಿಯಂತ್ರಿಸಿ, ಕರ್ಮಗಳಲ್ಲಿ ಸರಿಯಾದ ಆಯ್ಕೆ ಮಾಡಿಕೊಳ್ಳಿ ಎನ್ನುತ್ತದೆ. ಹೀಗೆ ಮಾನವನ ಮೂಲಭೂತವಾದ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತದೆ. ಭೌತಿಕ, ಮಾನಸಿಕ ಯುದ್ಧರಂಗದಲ್ಲಿ ವಿವೇಕದಿಂದ ನಡೆಯುವುದು ಹೇಗೆ ಎನ್ನುವುದು ಗೀತೆಯ ಮುಖ್ಯಧಾಟಿ.

ಡಿ.ವಿ.ಜಿ.ಯವರು ಹೇಳುವಂತೆ ತಲ್ಲಣಗೊಂಡ ಮನಸ್ಸಿಗೆ ಧೈರ್ಯ, ಚೆದುರಿ ಅಲುಗಾಡುವ ಮನಸ್ಸಿಗೆ ಒಂದು ನೆಲೆಮನೆ, ಸಂದೇಹದಲ್ಲಿ ಸಿಕ್ಕಿಕೊಂಡ ಭವಿಷ್ಯಕ್ಕೆ ಒಂದು ಭರವಸೆಯನ್ನು, ವಿವೇಕ ಶ್ರದ್ಧೆಗಳನ್ನು ಗೀತೆ ನೀಡಬೇಕು. ಗೀತೆ ಹೇಳುವ ಸ್ಥಿತಪ್ರಜ್ಞತೆಯ ಆದರ್ಶ, ಅದನ್ನು ಪಡೆಯುವ ಸಾಧನಮಾರ್ಗ: ಅನುಸಂಧಾನ, ಸಂಯಮ, ಅಭ್ಯಾಸಯೋಗ-ಇವೆಲ್ಲ ಅಂದಿನಂತೆ ಇಂದೂ ಸೂಕ್ತವಾದುದೇ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಅರ್ಹತೆಯ ನಿಷ್ಕರ್ಷೆ ಹೇಗೆ? ನಿಯಮಗಳೇನು? ಇವು ಪರಸ್ಪರ ಸಾಧಕಗಳಾಗಲು ಸಾಧ್ಯವೆ? ಈ ಪ್ರಶ್ನೆಗಳಿಗೆ ಸ್ವಭಾವತತ್ತ್ವಗಳ ನಿರೂಪಣೆಯಿಂದ ಗೀತೆ ಉತ್ತರ ಸೂಚಿಸುತ್ತದೆ. ಅವರವರ ಮನಸ್ಸಿದ್ಧತೆಗೆ ತಕ್ಕಂತೆ, ಅವರವರ ಬುದ್ಧಿಶಕ್ತಿಗೆ ತಕ್ಕಂತೆ, ಅವರವರ ವ್ಯಕ್ತಿಸಂದರ್ಭಕ್ಕೆ ತಕ್ಕಂತೆ ತಮ್ಮತಮ್ಮ ಜೀವನವನ್ನು ಯೋಗ್ಯ ಮಾಡಿಕೊಳ್ಳುವ ದಾರಿಯನ್ನು ಸಮ್ಯಗ್ಜೀವನ ಶಾಸ್ತ್ರವಾದ ಗೀತೆ ತೋರಿಸುತ್ತದೆ. ಅದರ ಮಹೋಪದೇಶವೆಂದರೆ ಜೀವನದಲ್ಲಿ ಗೌರವ. ಜೀವನವೆಂದರೆ ಎಲ್ಲ ಪ್ರಾಣಿಗಳ ಆಂತರ್ಯದಲ್ಲಿ ಅಂಶತಃ ಅಡಗಿದ ಬ್ರಹ್ಮಚೈತನ್ಯದ ಲೀಲೆ. ಇದನ್ನು ನಾವು ಗ್ರಹಿಸಿ, ಜೀವನಕಾರ್ಯಗಳನ್ನು ಶ್ರದ್ಧೆಯಿಂದಲೂ, ದಕ್ಷತೆಯಿಂದಲೂ ನಿರ್ವಹಿಸಬೇಕಾದದ್ದು ಕರ್ತವ್ಯ. ಅದು ತುಚ್ಛವಲ್ಲ; ಅದು ಶ್ರೇಯೋವಕಾಶ ಮತ್ತು ಮಹಾ ಕರ್ತವ್ಯ. ಅದು ನಮ್ಮ ಆದರಣೆಗೂ ಸೇವೆಗೂ ಅರ್ಹವಾದದ್ದು. ಸ್ವಧರ್ಮದಲ್ಲಿ ಪವಿತ್ರಬುದ್ಧಿಯಿಂದಲೂ, ಪಾರಮಾರ್ಥಿಕ ಶ್ರದ್ಧೆಯಿಂದಲೂ ತೊಡಗಬೇಕಾದದ್ದು. ಸಮ್ಯಗ್ಜೀವನವೇ ಭಗವದಾರಾಧನೆ. ಎಲ್ಲ ಭಾಷ್ಯಕಾರರುಗಳೂ ಮೋಕ್ಷಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದ್ದರೂ, ಲೋಕಜೀವನದ ದೃಷ್ಟಿಯಿಂದಲೂ ಗೀತೋಪದೇಶವನ್ನು ಎಲ್ಲ ಜನರೂ ಅಂಗೀಕರಿಸತಕ್ಕದ್ದೆಂದು ಪ್ರತಿಪಾದಿಸಿದ್ದಾರೆ. ಗೀತೆಯ ಬೋಧನೆಯು ಯಾವ ಅಂಶದಲ್ಲಿಯೂ ಮನುಷ್ಯಬುದ್ಧಿಯ ಹೇತುವಿಚಾರ ಪ್ರವೃತ್ತಿ(Rationality)ಗೆ ಪ್ರತಿಕೂಲವಾಗಿಲ್ಲ. ಸಕಲ ಮತದವರೂ ಸ್ವಮತ ವಿರೋಧವಿಲ್ಲದೆ ಅನುಸರಿಸಬಹುದು. ಗೀತೆಯಲ್ಲಿ ಪಕ್ಷೈಕವಾದ (Dogmatism) ಇಲ್ಲ; ಮತಪಾಷಂಡತ್ವವಿಲ್ಲ; ಅನ್ಯಾಭಿಪ್ರಾಯ ಅಸಹನೆಯಿಲ್ಲ. **ವಿಮೃಶ್ಯೈತದಶೇಷೇಣ** *(೧೮-೬೩)* ಎಂದು ವಿಚಾರ ತರ್ಕವನ್ನು ಗೀತೆ ಅಪೇಕ್ಷಿಸುತ್ತದೆ.